ಕೃಪ ಹೀಗೆಂದದ್ದಕ್ಕೆ ಕರ್ಣನ ಮುಖ ಕಂಗೆಟ್ಟುಬಾಗಿಬಿಟ್ಟಿತು – ಜೋರು ಮಳೆಗೆ ಮುದುಡಿ ಬಾಗುವ ತಾವರೆಯ ಹಾಗೆ.

**ದುರ್ಯೋಧನ:** ಆಚಾರ್ಯರೇ, ರಾಜರಲ್ಲಿ ಮೂರು ಥರ ಎಂದು ಶಾಸ್ತ್ರವೇ ಹೇಳುತ್ತದಲ್ಲ – ಸತ್ಕುಲೀನ, ಶೂರ, ಸೇನೆ ನಿಭಾಯಿಸಬಲ್ಲವನು ಎಂದು. ಅರ್ಜುನ ರಾಜರಲ್ಲದವರ ಜೊತೆ ಯುದ್ಧ ಮಾಡುವುದಿಲ್ಲ ಎನ್ನುವುದಾದರೆ ಇಗೋ ಇಲ್ಲೇ ಈಗಲೇ ಇವನನ್ನು ಅಂಗರಾಜ್ಯದ ರಾಜನನ್ನಾಗಿ ಪಟ್ಟಕ್ಕೇರಿಸುತ್ತೇನೆ.


ರಾಜ್ಯಾಭಿಷೇಕ ಜರುಗಿದ ಮೇಲೆ, ಆಗ ಉತ್ತರೀಯದ ಮೇಲು ಜಾರುತ್ತಾ ಬೆವರು ಸುರಿಯುತ್ತಾ ಇಡೀ ಮೈ ನಡುಗುತ್ತಾ ಊರುಗೋಲಲ್ಲೇ ಜೀವ ಇಟ್ಟುಕೊಂಡು – ಅದನ್ನೇ ಊರಿಕೊಂಡು ನಡೆಯಲಾರದೆ ನಡೆಯುತ್ತಾ ರಂಗದೊಳಕ್ಕೆ ಅಧಿರಥ ಬಂದ.

ಅವನನ್ನು ಕಂಡ ಕೂಡಲೇ ಕರ್ಣ ಬಿಲ್ಲನ್ನು ಕೆಳಗಿಟ್ಟ. ಅಪ್ಪನ ಕಡೆಗೆ ಬಂದ. ಅಭಿಷೇಕದಿಂದ ಒದ್ದೆಯಾದ ತಲೆಯನ್ನು ಅವನ ಕಾಲಿಗೆ ಸೋಕಿಸಿದ.

ದಿಕ್ಕು ತೋಚದೆ ಅವನು ತನ್ನ ಪಾದವನ್ನು ಬಟ್ಟೆಯಲ್ಲಿ ಮುಚ್ಚಿಕೊಳ್ಳುತ್ತಾ 'ಕಂದಾ' ಎಂದು ಬಾಯಿ ತುಂಬಾ ಕರೆದ. ಮುದ್ದಿನಿಂದ ಅಪ್ಪಿಕೊಂಡ. ಅಂಗ ರಾಜ್ಯಾಭಿಷೇಕದಿಂದ ಒದ್ದೆಯಾದ ತಲೆಯನ್ನು ಕಣ್ಣೀರು ಸುರಿಸಿ ಇನ್ನಷ್ಟು ಒದ್ದೆಮಾಡಿದ.

ಇದನ್ನು ಕಂಡು ಪಾಂಡವರು 'ಓ ಇವನು ಸೂತನ ಮಗ' ಎಂದುಕೊಂಡರು.

ಭೀಮ ಗಹಗಹಿಸಿ ನಕ್ಕು 'ಲೇ ಸೂತನ ಮಗನೇ, ಅರ್ಜುನನ ಜತೆ ಯುದ್ಧ ಮಾಡೋದಕ್ಕೆ ನೀ ಯೋಗ್ಯ ಅಲ್ಲ ಅಂತ ನಿನಗೇ ತಿಳೀತಾ' ಅಂದ.



# ಕುಂತಿ ಒಳಕ್ಕೆ ಬಂದಳು-ಸತ್ತವರ ಹತ್ತಿರ ಅಮೃತ ಬಂದ ಹಾಗೆ

## (ಬಕಾಸುರನ ವಧೆಗೆ ಮುನ್ನ)

ಏಕಚಕ್ರನಗರದಲ್ಲಿ ಆ ಕುಂತೀ ಮಕ್ಕಳು ಸ್ವಲ್ಪ ಕಾಲಕ್ಕೆ ಅಂತ ಬ್ರಾಹ್ಮಣನ ಮನೆಯಲ್ಲಿ ತಂಗಿದರು. ಭಿಕ್ಷೆ ಎತ್ತೋವಾಗ ಮಾತಾಡತಿರಲಿಲ್ಲ. ತಡ ಆದರೆ ಅವ್ವ ತವಕ ಪಡತಾಳೆ ಎಂದುಕೊಂಡು ಬೇಗ ಬೇಗ ಬಂದುಬಿಡುತಿದ್ದರು.

ಸಂಜೆ ಹೊತ್ತಿಗೆ, ಕುಂತೀಗೆ ತಂದು ಒಪ್ಪಿಸುತಿದ್ದರು. ಅವಳು ಪಾಲು ಮಾಡಿಕೊಟ್ಟದ್ದನ್ನು ತಾಯಿ ಜತೆ ಉಣ್ಣುತಿದ್ದರು. ಅರ್ಧ ಭೀಮನಿಗೆ, ಉಳಿದರ್ಧ ಅಮ್ಮನ ಜತೆ ಮಿಕ್ಕ ವೀರರಿಗೆ.

ಹೀಗೆ ಆ ದೇಶದಲ್ಲಿ ತುಂಬಾ ಕಾಲ ಇದ್ದುಬಿಟ್ಟರು.

ಒಂದು ಸಾರಿ ಉಳಿದವರು ಭಿಕ್ಷೆಗೆ ಹೋದರು. ಭೀಮಸೇನ ಕುಂತೀ ಜತೇಲೇ ಉಳಕೊಂಡ.

ಕುಂತಿಯ ಕಿವಿಗೆ ಬ್ರಾಹ್ಮಣನ ಮನೆಯಿಂದ ಕರುಳಿರಿಯುವಂಥ ಸಂಕಟದ ದನಿ ಬಿತ್ತು. ಆ ಅಳು ಕೇಳಿ ಕುಂತಿಗೆ ತಡಕೊಳ್ಳೋಕೆ ಆಗಲಿಲ್ಲ. ಆ ದುಃಖ ಅವಳ ಎದೇನ ಕಡೆದ ಹಾಗೆ ಆಗುತಿತ್ತು. ಸುಮ್ಮನೆ ನೋಡಿಕೊಂಡಿರೋಕೆ ಆಗಲಿಲ್ಲ. ಕಾರುಣ್ಯ ಅವಳದು. ಭೀಮಸೇನನಿಗೆ ಹೀಗಂದಳು–

'ಧೃತರಾಷ್ಟ್ರನ ಮಕ್ಕಳ ಕಣ್ಣಿಗೆ ಬೀಳದ ಹಾಗೆ, ಎಲ್ಲಾ ದುಃಖ ಮರೆತು ಈ ಬ್ರಾಹ್ಮಣನ ಮನೇಲಿ ಇದೀವಿ. ಇವ ನಮ್ಮನ್ನು ಸುಖವಾಗಿ ನೋಡಿಕೋತಿದಾನೆ. ಇವನಿಗೇನಾದರೂ ಸಹಾಯ ಮಾಡಬೇಕು ಅಂತ ಅಷ್ಟು ದಿನದಿಂದ ಅಂದುಕೋತಾ ಇದ್ದೆ. ನೋಡು, ಒಳ್ಳೇವರಿಗೆ ಮಾಡಿದ ಉಪಕಾರ ಹಾಳಾಗಲ್ಲ. ಇನ್ನೊಬ್ಬರು ನಮಗೆ ಮಾಡಿದ್ದಕ್ಕಿಂತ ಹೆಚ್ಚಿಗೆ ನಾವು ಅವರಿಗೆ ಮಾಡಬೇಕು.

ಈ ಬ್ರಾಹ್ಮಣ ಯಾವುದೋ ಸಂಕಟದಲ್ಲಿ ಸಿಲುಕಿದಾನೆ ಅನ್ನೋದಂತೂ ಖಚಿತ. ಇಂಥ ಸಮಯದಲ್ಲಿ ಉಪಕಾರ ಮಾಡಿದರೆ ಸಮಯಕ್ಕೆ ನೆರವಾದ ಹಾಗೂ ಆಗತ್ತೆ.'

ಅದಕ್ಕೆ ಭೀಮ 'ಅವನಿಗೆ ಒದಗಿರೋ ಕಷ್ಟ ಏನು ಅಂತ ತಿಳಕೋ. ಎಷ್ಟೇ ಕಷ್ಟ ಆದರೂ ಅದಕ್ಕೊಂದು ದಾರಿ ಮಾಡತೀನಿ' ಅಂದ. ಹೀಗೆ ಮಾತಾಡುತ್ತ ಇರುವಾಗ ಅತ್ತ ಮತ್ತೆ ಆ ಬ್ರಾಹ್ಮಣನ ಹೆಂಡತಿಯ ದುಃಖದ ದನಿ ಕೇಳಿಸಿತು.

ಕಟ್ಟಿದ ಕರುವಿನ ಹತ್ತಿರಕ್ಕೆ ಕೆಚ್ಚಲು ಕಟ್ಟಿದ ತುಂಬಿದ ಹಸು ಓಡೋ ಥರ ಸರಸರ ಅಂತ ಬ್ರಾಹ್ಮಣನ ಒಳಮನೆಗೆ ಬಂದಳು ಕುಂತಿ. ಅಲ್ಲಿ ಆ ಬ್ರಾಹ್ಮಣ – ತನ್ನ ಹೆಂಡತಿ, ಮಗಳು, ಮಗನ ಜತೆ ಕೂತಿದ್ದ ತಲೆ ತಗ್ಗಿಸಿಕೊಂಡು.

**ಬ್ರಾಹ್ಮಣ:** ತ್ಥು ಈ ಹಾಳು ಬಾಳಿಗಿಷ್ಟು. ಬರೀ ಬೆಂಡು. ಹುರುಳಿಲ್ಲ ಇದರಲ್ಲಿ. ಬೇರೆಯವರ ಆಸರೇಲಿರಬೇಕು– ಇಷ್ಟ ಇಲ್ಲದ್ದರಲ್ಲಿ ಪಾಲುದಾರ ಆಗಬೇಕು. ದುಃಖ ಶುರುವಾಗೋದೇ ಹೀಗೆ.

ಬದುಕೋದು ಅಂದರೇನೇ ದೊಡ್ಡ ದುಃಖ. ಬದುಕು ಅಂದರೆ ಅದೊಂದು ರೋಗ. ಹಣ ಸಂಪಾದಿಸೋದು ಅನ್ನೋದೇ ನರಕ. ಹಣ ಇಲ್ಲ ಅನ್ನೋದೂ ದುಃಖ. ಹಣ ಬಂತು ಅಂದರೆ ಇನ್ನೂ ದುಃಖ. ಬಂದ ಹಣ ಸಂಪತ್ತಿನ ಮೇಲೆ ಸ್ನೇಹ ಬಂದ ಮೇಲೆ ಅದನ್ನ ಕಾಪಾಡಿಕೊಳ್ಳೋದಿದೆಯಲ್ಲ ಅದು ಕಡುದುಃಖ.

ಇವತ್ತಿನದು ದುಃಖದಿಂದ ನಾಳಿನದು ದುಃಖಕ್ಕೆ. ಜೀವನ ಅಂದರೆ ಇಷ್ಟೇನೆ. ಧರ್ಮ, ಅರ್ಥ, ಕಾಮ ಅಂತ ಸುಮ್ಮನೆ ಪಾಡು ಪಡೋದು. ಅವು ಕೈಗೆ ಸಿಗಲಿಲ್ಲ ಅಂತ ಸಂಕಟಪಡೋದು. ಕೆಲವರು ಇವೆಲ್ಲಕ್ಕಿಂತ ಮೋಕ್ಷ ದೊಡ್ಡದು ಅನ್ನುತ್ತಾರೆ. ಅದಂತೂ ಎಲ್ಲೂ ಕಂಡಿಲ್ಲ.

ಲೇ ಹಾರೋತಿ, ನಿಂಗೆ ಈ ಊರು ಬಿಟ್ಟು ನೆಮ್ಮದಿಯಾದ ಬೇರೆ ಜಾಗಕ್ಕೆ ಹೋಗೋಣ ಅಂತ ಆಗಲೇ ಹೇಳಿದೆ. ನೀ ಕೇಳಿದೆಯಾ. 'ನಾ ಹುಟ್ಟಿದ್ದು ಇಲ್ಲೇ' ಅಂದೆ. 'ನಾ ಬೆಳೆದಿದ್ದಿಲ್ಲಿ' ಅಂದೆ. ನಿಮ್ಮಪ್ಪ ಮುದುಕ ಆಗಿ ಸತ್ತುಹೋದ. ನಿಮ್ಮಮ್ಮನೂ ಇಲ್ಲ.